# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 51 ಫ್ರಾ.ಸಾ. : 27**

| | | |
|---|---|---|
| ಸಾಕ್ಷಿಯ ಹೆಸರು | : | ಉದಯ ಸೀತಾರಾಮ ಪಡ್ತಿ |
| ತಂದೆಯ ಹೆಸರು | : | ಸೀತಾರಾಮ ಪಡ್ತಿ |
| ವಯಸ್ಸು | : | 63 ವರ್ಷ |
| ಕೆಲಸ | : | ನಿವೃತ್ತ ಪೊಲೀಸ್ ಮುಖ್ಯ ಪೇದೆ |
| ವಾಸ | : | ಕಾರವಾರ |

**ದಿನಾಂಕಃ 19-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. 2011 ರಿಂದ 2017 ರ ವರೆಗೆ ನಾನು ಕದ್ರಾ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 14-02-2014 ರಂದು ರಾತ್ರಿ 11-15 ಗಂಟೆಗೆ ನಾನು ನಮ್ಮ ಮನೆಯಲ್ಲಿದ್ದಾಗ, ಆ ದಿನ ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ಮುಖ್ಯ ಪೇದೆಯವರು ನನಗೆ ಕರೆ ಮಾಡಿ, "ರಾಜೀವ ನಗರದಲ್ಲಿರುವ ವೇಲು ಇಲ್ಲನ್ ಗುಡಿಯವರ ಮನೆಯಲ್ಲಿ ಯಾರೋ ವೇಲು ರವರ ಮಗಳ ಕುತ್ತಿಗೆಯನ್ನು ಕೊಯಿದು ಹೋಗಿರುತ್ತಾರೆ" ಎಂದು 2 ಜನ ಠಾಣೆಗೆ ಬಂದು ತಿಳಿಸಿರುತ್ತಾರೆ, ಆದ್ದರಿಂದ ಕೂಡಲೇ ರಾಜೀವ ನಗರಕ್ಕೆ ಬನ್ನಿ ಎಂದು ತಿಳಿಸಿರುತ್ತಾರೆ. ವಿಷಯ ತಿಳಿದ ಕೂಡಲೇ ನಾನು ರಾಜೀವ ನಗರದಲ್ಲಿರುವ ವೇಲು ಇಲ್ಲನ್ ಗುಡಿಯವರ ಮನೆಯ ಬಳಿ ಹೋದಾಗ, ಅಲ್ಲಿ ಬಹಳಷ್ಟು ಜನರು ಸೇರಿದ್ದರು, ಅವರ ಮನೆಯಲ್ಲಿ ಕರೆಂಟ್ ಇರಲಿಲ್ಲ, ಅಲ್ಲಿ ನಾನು ಮನೆಯ ಒಳಗೆ ಹೋಗಿ ನೋಡಿದಾಗ, ಮನೆಯ ಹಾಲ್ ನಲ್ಲಿ ವೇಲು ರವರ ಮಗಳ ಕುತ್ತಿಗೆ ಕೊಯಿದಿದ್ದು, ಆಕೆ ಮೃತಪಟ್ಟಿದ್ದಳು, ಅದರ ಪಕ್ಕದಲ್ಲಿ ವೇಲು ರವರ ಹೆಂಡತಿ ಜಾನಕಿ ಕುಳಿತಿದ್ದು, ಆಕೆಯ ಎಡಗೈ ತುಂಡಾಗಿರುತ್ತದೆ ಹಾಗೂ ಆಕೆಯ ತಲೆಗೆ ಕತ್ತರಿಸಿದ ಗಾಯವಾಗಿ, ರಕ್ತ ಬರುತ್ತಿತ್ತು. ಸ್ಥಳದಲ್ಲಿದ್ದ ಚಾಸಾ-56 ರವರು ನನಗೆ ಮತ್ತು ಚಾಸಾ-50 ರವರಿಗೆ ಜಾನಕಿಯನ್ನು ಕದ್ರಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಪ್ರಥಮ ಚಿಕಿತ್ಸೆ ಮಾಡಿಸಿ ಎಂದು ತಿಳಿಸಿದ್ದು, ಆಗ ನಾನು ಮತ್ತು ಚಾಸಾ-50 ರವರು

ಸೇರಿ ಜಾನಕಿಯನ್ನು ಹಾಗೂ ಆಕೆಯ ತುಂಡಾಗಿದ್ದ ಕೈಯನ್ನು ನಮ್ಮ ಇಲಾಖಾ ಜೀಪ್ ನಲ್ಲಿ ಕದ್ರಾ ಕೆ.ಪಿ.ಸಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ.

2. ಕದ್ರಾ ಕೆ.ಪಿ.ಸಿ ಆಸ್ಪತ್ರೆಯಲ್ಲಿ ವೈದ್ಯರು ಜಾನಕಿಗೆ ಪ್ರಥಮ ಚಿಕಿತ್ಸೆ ಮಾಡಿ, ಆಕೆಯನ್ನು ಕಾರವಾರದ ಸಿವಿಲ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಸೂಚಿಸಿರುತ್ತಾರೆ. ಅಷ್ಟರಲ್ಲಿ ಚಾಸಾ-56 ರವರು 108 ಅಂಬ್ಯುಲೇನ್ಸಗೆ ಕರೆ ಮಾಡಿ, ಕೆ.ಪಿ.ಸಿ ಆಸ್ಪತ್ರೆಯ ಬಳಿ ಹೋಗುವಂತೆ ತಿಳಿಸಿದ ಮೇರೆಗೆ, 108 ಅಂಬ್ಯುಲೇನ್ಸ್ ಆಸ್ಪತ್ರೆಯ ಬಳಿ ಬಂದಿದ್ದು, ಸದರಿ ವಾಹನದಲ್ಲಿ ನಾವು ಜಾನಕಿಯನ್ನು ಹಾಗೂ ಆಕೆಯ ತುಂಡಾಗಿದ್ದ ಕೈಯನ್ನು ಕಾರವಾರದ ಸಿವಿಲ್ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ಅಲ್ಲಿ ವೈದ್ಯರು ಜಾನಕಿಗೆ ಉಪಚಾರ ಮಾಡಿ, ಹೆಚ್ಚಿನ ಚಿಕಿತ್ಸೆಗಾಗಿ ಗೋವಾದ ಬಾಂಬೊಲಿಂ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಸೂಚಿಸಿದ ಮೇರೆಗೆ, ನಾವು ಆಕೆಯನ್ನು ಖಾಸಗಿ ಅಂಬ್ಯುಲೇನ್ಸ್ ಮೇಲಾಗಿ ಗೋವಾದ ಬಾಂಬೋಲಿಂ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿ ಆಕೆಗೆ ಚಿಕಿತ್ಸೆ ಮಾಡಿ, ಆಸ್ಪತ್ರೆಯಲ್ಲಿ ದಾಖಲಿಸಿಕೊಂಡಿರುತ್ತಾರೆ ಹಾಗೂ ಆಕೆಯ ಮೈ ಮೇಲೆ ಇದ್ದ ಬಟ್ಟೆಗಳನ್ನು ನಮ್ಮ ವಶಕ್ಕೆ ನೀಡಿರುತ್ತಾರೆ.

3. ಆ ನಂತರ ನಾವು ದಿಃ 16-02-2014 ರಂದು ಪೊಲೀಸ್ ಠಾಣೆಗೆ ಹಿಂದಿರುಗಿ ಜಾನಕಿಯ ಬಟ್ಟೆಗಳನ್ನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಅವರು ಸದರಿ ಬಟ್ಟೆಗಳನ್ನು ಪಂಚರ ಸಮಕ್ಷಮ ಬೆಳಿಗ್ಗೆ 11-30 ರಿಂದ 12-00 ಗಂಟೆಯ ವರೆಗೆ ಜಪ್ತು ಪಂಚನಾಮೆಯಡಿ ಜಪ್ತುಪಡಿಸಿಕೊಂಡಿರುತ್ತಾರೆ ಹಾಗೂ ಈ ಮೇಲೆ ಹೇಳಿದ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಜಾನಕಿಯ ಬಟ್ಟೆಗಳಾದ ಮುದ್ದೆ ಮಾಲು-30 ಸ್ವೆಟರ್, ಮುದ್ದೆ ಮಾಲು-31 ಸೀರೆ, ಮುದ್ದೆ ಮಾಲು-32 ಲಂಗ, ಮುದ್ದೆ ಮಾಲು-33 ಬೌಸ್ ಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

4. ದಿಃ 02-05-2014 ರಿಂದ ದಿಃ 06-05-2014 ರ ವರೆಗೆ ಕಾರವಾರದ ಕಡಲ ಉತ್ಸವಕ್ಕೆ ಕರ್ತವ್ಯದ ಮೇಲೆ ನನ್ನನ್ನು ನೇಮಕ ಮಾಡಿದ್ದರು. ದಿಃ 06-05-2014 ರಂದು ಕರ್ತವ್ಯ ಮುಗಿಸಿ, ಬೆಳಿಗ್ಗೆ 10-30 ಗಂಟೆಗೆ ಕದ್ರಾ ಪೊಲೀಸ್ ಠಾಣೆಗೆ ಹೋಗಿ ವರದಿ ಮಾಡಿಕೊಂಡಿರುತ್ತೇನೆ. ಅದೇ ದಿನ ತನಿಖಾಧಿಕಾರಿಗಳು ನನಗೆ ಮಂಗಳೂರಿನ ಎಫ್.ಎಸ್.ಎಲ್ ನಿಂದ ಬಂದ ವರದಿಯ ನಕಲು ಪ್ರತಿ, ಕೊಲೆ ಮಾಡಲು ಬಳಸಿದ ಕತ್ತಿ, ಮೂರೂ ಶವಗಳ ಶವ

ಪರೀಕ್ಷಾ ವರದಿಗಳ ನಕಲು ಪ್ರತಿಗಳು, ಜಾನಕಿಯ ಗಾಯದ ಪ್ರಮಾಣ ಪತ್ರದ ನಕಲು ಇವುಗಳನ್ನು 4 ಕೋರಿಕೆ ಪತ್ರದೊಂದಿಗೆ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ, ಆಸ್ಪತ್ರೆಯ ವೈದ್ಯರ ಅಭಿಪ್ರಾಯ ಪಡೆದುಕೊಂಡು ಬರುವಂತೆ ಸೂಚಿಸಿರುತ್ತಾರೆ. ಅದರಂತೆ ನಾನು ದಿಃ 07-05-2014 ರಂದು ಸದರಿ ಕತ್ತಿ ಹಾಗೂ ವರದಿಗಳನ್ನು ಕೋರಿಕೆ ಪತ್ರದೊಂದಿಗೆ ಠಾಣೆಯಿಂದ ಪಡೆದು, ಜಿಲ್ಲಾ ಆಸ್ಪತ್ರೆ ಕಾರವಾರಕ್ಕೆ ತಂದು, ಅಲ್ಲಿ ಹಾಜರಿದ್ದ ಡಾಃ ನಂದಕುಮಾರ ಮತ್ತು ಡಾಃ ರತ್ನಾಕರ ಕುರ್ಡೇಕರ ರವರಿಗೆ ಸೀಲ್ ಮಾಡಿದ ಕತ್ತಿ, ಎಫ್.ಎಸ್.ಎಲ್ ನ ವರದಿಯ ನಕಲು ಪ್ರತಿ, ವೇಲು ಮತ್ತು ಸತ್ಯ ನಾರಾಣಯ ಮೂರ್ತಿಯ ಶವ ಪರೀಕ್ಷಾ ವರದಿಗಳ ನಕಲು ಪ್ರತಿಗಳನ್ನು ಕೋರಿಕೆ ಪತ್ರದೊಂದಿಗೆ ನೀಡಿರುತ್ತೇನೆ. ಆನಂತರ ಅಲ್ಲಿ ಆ ಇಬ್ಬರು ವೈದ್ಯರು ಕತ್ತಿ, ಎಫ್.ಎಸ್.ಎಲ್ ನ ವರದಿ, ಹಾಗೂ ಶವ ಪರಿಕ್ಷಾ ವರದಿಗಳನ್ನು ಪರೀಕ್ಷಿಸಿರುತ್ತಾರೆ. ತಾವು ಪರೀಕ್ಷೆ ಮಾಡಿದ ಬಗ್ಗೆ ಡಾಃ ರತ್ನಾಕರ ಕುರ್ಡೇಕರ ರವರು ಕತ್ತಿಯ ಚಿತ್ರ ಹಾಗೂ ಅದರ ಅಳತೆಯನ್ನು ಹಾಳೆಯ ಮೇಲೆ ಬಿಡಿಸಿ, ಸದರಿ ಚಿತ್ರವನ್ನು ಹಾಗೂ ಅವರ ಲಿಖಿತ ಅಭಿಪ್ರಾಯವನ್ನು ನೀಡಿರುತ್ತಾರೆ. ಆದರೆ ಆ ದಿನ ಡಾಃ ನಂದಕುಮಾರ ರವರು ಕೇವಲ ತಮ್ಮ ಅಭಿಪ್ರಾಯವನ್ನು ಮಾತ್ರ ನೀಡಿರುತ್ತಾರೆ. ಆನಂತರ ನಾನು ಅದನ್ನು ತೆಗೆದುಕೊಂಡು ಬಂದು ತನಿಖಾಧಿಕಾರಿಗೆ ನೀಡಿರುತ್ತೇನೆ. ಅದಲ್ಲದೇ ಆ ದಿನ ಡಾಃ ಸುಭಾಷ ಹಾಗೂ ಡಾಃಕಿರಣಕುಮಾರ ರವರು ಲಭ್ಯವಿಲ್ಲದ ಕಾರಣ, ಅವರಿಗೆ ನೀಡಬೇಕಾದ ವರದಿ ಹಾಗೂ ಕತ್ತಿಯನ್ನು ವಾಪಸು ಠಾಣೆಗೆ ತಂದಿರುತ್ತೇನೆ.

5. ದಿಃ 10-05-2014 ರಂದು ಪುನಃ ಕತ್ತಿ, ಎಫ್.ಎಸ್.ಎಲ್ ನ ವರದಿಯ ನಕಲು ಪ್ರತಿ ಮತ್ತು ಅಶ್ವಿನಿಯ ಶವ ಪರೀಕ್ಷಾ ವರದಿಯ ನಕಲು ಪ್ರತಿಯನ್ನು ತೆಗೆದುಕೊಂಡು ಹೋಗಿ, ಸಿವಿಲ್ ಆಸ್ಪತ್ರೆಯ ಡಾಃ ಸುಭಾಷ ರವರಿಗೆ ಕೋರಿಕೆ ಪತ್ರದೊಂದಿಗೆ ನೀಡಿರುತ್ತೇನೆ. ಅವರು ಕತ್ತಿ, ಎಫ್.ಎಸ್.ಎಲ್ ನ ವರದಿ, ಹಾಗೂ ಶವ ಪರಿಕ್ಷಾ ವರದಿಯನ್ನು ಪರೀಕ್ಷಿಸಿ, ಕತ್ತಿಯ ಚಿತ್ರ ಹಾಗೂ ಅದರ ಅಳತೆಯನ್ನು ಹಾಳೆಯ ಮೇಲೆ ಬಿಡಿಸಿ, ಸದರಿ ಚಿತ್ರವನ್ನು ಹಾಗೂ ಅವರ ಲಿಖಿತ ಅಭಿಪ್ರಾಯವನ್ನು ನೀಡಿರುತ್ತಾರೆ. ಆನಂತರ ನಾನು ಅದನ್ನು ತೆಗೆದುಕೊಂಡು ಬಂದು ತನಿಖಾಧಿಕಾರಿಗೆ ನೀಡಿರುತ್ತೇನೆ.

6. ಆನಂತರ ದಿಃ 17-05-2014 ರಂದು ಪುನಃ ಕತ್ತಿ, ಎಫ್.ಎಸ್.ಎಲ್ ನ ವರದಿಯ ನಕಲು ಪ್ರತಿ ಹಾಗೂ ಜಾನಕಿಯ ಗಾಯದ ಪ್ರಮಾಣ ಪತ್ರದ ನಕಲು ಪ್ರತಿಯನ್ನು

ತೆಗೆದುಕೊಂಡು ಹೋಗಿ, ಸಿವಿಲ್ ಆಸ್ಪತ್ರೆಯ ಡಾಃ ಕಿರಣಕುಮಾರ ರವರಿಗೆ ಕೋರಿಕೆ ಪತ್ರದೊಂದಿಗೆ ನೀಡಿರುತ್ತೇನೆ. ಅವರು ಕತ್ತಿ, ಎಫ್.ಎಸ್.ಎಲ್ ನ ವರದಿ, ಜಾನಕಿಯ ಗಾಯದ ಪ್ರಮಾಣ ಪತ್ರ ಪರೀಕ್ಷಿಸಿ, ಕತ್ತಿಯ ಚಿತ್ರ ಹಾಗೂ ಅದರ ಅಳತೆಯನ್ನು ಹಾಳೆಯ ಮೇಲೆ ಬಿಡಿಸಿ, ಸದರಿ ಚಿತ್ರವನ್ನು ಹಾಗೂ ಅವರ ಲಿಖಿತ ಅಭಿಪ್ರಾಯವನ್ನು ನೀಡಿರುತ್ತಾರೆ. ಆನಂತರ ನಾನು ಅದನ್ನು ತೆಗೆದುಕೊಂಡು ಬಂದು ತನಿಖಾಧಿಕಾರಿಗೆ ನೀಡಿರುತ್ತೇನೆ.

7. ಆ ನಂತರ ದಿಃ 20-05-2014 ರಂದು ಡಾಃ ನಂದಕುಮಾರ ರವರು ಕತ್ತಿಯ ಚಿತ್ರ ಹಾಗೂ ಅದರ ಅಳತೆಯನ್ನು ಹಾಳೆಯ ಮೇಲೆ ಬಿಡಿಸಿ, ಸದರಿ ಚಿತ್ರವನ್ನು ನೀಡಿದ್ದು, ನಾನು ಅದನ್ನು ತೆಗೆದುಕೊಂಡು ಬಂದು ತನಿಖಾಧಿಕಾರಿಗೆ ನೀಡಿರುತ್ತೇನೆ. ಸಾಕ್ಷಿಯು ತಾನು ತೆಗೆದುಕೊಂಡು ಹೋದ 4 ಕೋರಿಕೆ ಪತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-70 ರಿಂದ ನಿಪಿ-73 ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ಆಸ್ಪತ್ರಗೆ ತೆಗೆದುಕೊಂಡು ಹೋಗಿದ್ದ ಮುದ್ದೆ ಮಾಲು-26 ಕತ್ತಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

8. ರಾಜೀವ ನಗರಕ್ಕೆ ನಾನು ಹೋದಾಗ ರಾತ್ರಿ 11-15 ಗಂಟೆಯಾಗಿತ್ತು. ನನಗೆ ಮಾಹಿತಿಯು ಠಾಣೆಯಿಂದ ರಾತ್ರಿ ಸುಮಾರು 10-45 ಗಂಟೆಗೆ ಬಂದಿರುತ್ತದೆ. ನಾನು ಸ್ಥಳಕ್ಕೆ ಹೋಗುವ ಮೊದಲೇ ಮನೆಯ ಒಳಗೆ ಯಾರು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಚಾಸಾ-56 ರವರು ಮನೆಯ ಒಳಗೆ ಜನರ ಬಳಿ ವಿಚಾರಣೆ ಮಾಡುತ್ತಿದ್ದರು. ಮನೆಯ ಒಳಗೆ ಸುಮಾರು 10-15 ಜನರು ಇದ್ದರು. ಆ ಸಮಯದಲ್ಲಿ ಜಾನಕಿಯ ಕೈ ತುಂಡಾಗಿ ಆಕೆ ಅಲ್ಲಿಯೇ ಕುಳಿತಿದ್ದಳು. ಚಾಸಾ-56 ರವರು ಜಾನಕಿ ಬಳಿ ವಿಚಾರಣೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಕಾರವಾರ ಸಿವಿಲ್ ಆಸ್ಪತ್ರೆ ಹಾಗೂ ಕೆ.ಪಿ.ಸಿ ಆಸ್ಪತ್ರೆಯ ವೈದ್ಯರ ಬಳಿ ಜಾನಕಿ ಮಾತನಾಡಿರುವುದಿಲ್ಲ. ಗೋವಾದ ಬಾಂಬೋಲಿಂ ಆಸ್ಪತ್ರೆಯ ವೈದ್ಯರು ಜಾನಕಿಯ ಬಟ್ಟೆಗಳನ್ನು ನಮ್ಮ ವಶಕ್ಕೆ ನೀಡಿದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ.

9. ಜಾನಕಿಯ ಬಟ್ಟೆಗಳನ್ನು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದ ಬಗ್ಗೆ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು-30 ರಿಂದ 33 ಬಟ್ಟೆಗಳು ಜಾನಕಿಗೆ ಸೇರಿದವುಗಳಲ್ಲ ಎಂದರೆ ಸರಿಯಲ್ಲ. ವೈದ್ಯರು ಸದರಿ ಬಟ್ಟೆಗಳನ್ನು ನಮಗೆ ನೀಡುವಾಗ ಯಾವುದೇ ಸೀಲ್ ಮಾಡಿರುವುದಿಲ್ಲ. ನಾನು ಸಿವಿಲ್ ಆಸ್ಪತ್ರೆಯ ವೈದ್ಯರಿಗೆ

ಯಾವುದೇ ಕತ್ತಿ, ಎಫ್.ಎಸ್.ಎಲ್ ವರದಿ, ಶವ ಪರೀಕ್ಷಾ ವರದಿಗಳು ಹಾಗೂ ಗಾಯದ ಪ್ರಮಾಣ ಪತ್ರಗಳನ್ನು ಅಭಿಪ್ರಾಯಕ್ಕಾಗಿ ನೀಡಿಲ್ಲ ಹಾಗೂ ಅವರಿಂದ ಯಾವುದೇ ಕತ್ತಿಯ ಚಿತ್ರ ಹಾಗೂ ಅಭಿಪ್ರಾಯವನ್ನು ಪಡೆದುಕೊಂಡು ಬಂದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ